

ಬಿದ್ರೆಹಳ್ಳಿ ಮೂಡಲಪಾಯ ಬಯಲಾಟ ಮಂಡಳಿ ಕೊನೇಹಳ್ಳಿ ತಂಡ ಪ್ರದರ್ಶಿಸಿದ ‘ಹಿಡಿಂಬಾಸುರನ ವಧೆ’ ಕಥೆಯ ದೃಶ್ಯ. —ಪ್ರಜಾವಾಣಿ ಚಿತ್ರ

Form itself belongs to whole society. ಆದ್ದರಿಂದ ರಂಗಭೂಮಿ ಸಾಮಾಜಿಕ ಕಲೆಯಾದುದರಿಂದ ಪುರಾಣ, ಮಹಾಕಾವ್ಯಗಳನ್ನು ವರ್ತಮಾನಕ್ಕೆ ತಂದು ತಳುಕು ಹಾಕುತ್ತಾರೆ. ಕೆಲವು ಕಥೆಗಳು ಜಾನಪದ ಮೂಲದ್ದೇ ಆಗಿವೆ. ಇತಿಹಾಸ ಮೂಲ ಕಥೆಗಳು ಜಾನಪದ ಸ್ವರೂಪವನ್ನು ಪಡೆಯುತ್ತವೆ. ಯಾವುದೇ ಮೂಲದಿಂದ ಪಡೆದರೂ ಜೀವನಕ್ಕೆ ಹತ್ತಿರವಾಗುವಂತೆ, ಮಾರ್ಗಸೂಚಿ ಆಗುವಂತೆ ಮಾರ್ಪಡಿಸಿಕೊಳ್ಳುತ್ತಾರೆ. ಕುಮಾರರಾಮನ ಕಥೆ ಐತಿಹಾಸಿಕವಾಗಿದ್ದರೂ ಅದರಲ್ಲಿ ಜಾನಪದ ಅಂಶಗಳು ಸೇರಿಕೊಂಡಿವೆ. ಈ ಕಥೆಯಲ್ಲಿ ಬರುವ ಈಡಿಪಸ್ ಕಾಂಪ್ಲೆಕ್ಸ್ ಅನ್ನು ಜಾನಪದರು ತುಂಬಾ ತಾರ್ಕಿಕವಾಗಿ ನಿರೂಪಿಸಿ ನೈತಿಕತೆಯನ್ನು ಎತ್ತಿ ಹಿಡಿಯುವರು.

ರತ್ನಾಜಿ ಕಂಪ್ಲಿರಾಯನ ಎರಡನೇ ಅಥವಾ ಮೂರನೆಯ ಹೆಂಡತಿ. ಆಕೆ ಹರೆಯದವಳು. ರಾಯ ವಯಸ್ಸಾದವ. ಸಹಜವಾಗಿ ಮಗ ಕುಮಾರನಲ್ಲಿ ಕಾಮವನ್ನು ಕಾಣಲು ಬಯಸುವಳು. ಆದರೆ ಕುಮಾರರಾಮ ಪರನಾರಿ ಸೋದರ ಬಿರುದಾಂಕಿತ. ಆತ ಆಕೆಯನ್ನು ತಾಯಿಯಂತೆ ಕಾಣುವನು.

ಒಮ್ಮೆ ಒಂದು ಪ್ರಸಂಗ ಜರುಗುತ್ತದೆ. ಕುಮಾರರಾಮ ವಾರಿಗೆಯವರ ಸಂಗಡ ಚೆಂಡಾಟ ಆಡುತ್ತಿರುತ್ತಾನೆ. ಚೆಂಡು ಆಕಸ್ಮಿಕವಾಗಿ ಆಚೆಗೆ ಬಂದು ಬೀಳುತ್ತದೆ. ಅದನ್ನು ತರಲು ಹೋದಾಗ ತಾಯಿ ರತ್ನಾಜಿ ಚೆಂಡನ್ನು ಎದೆ ಕುಪ್ಪುಸದಲ್ಲಿಟ್ಟುಕೊಳ್ಳುತ್ತಾಳೆ. ಕುಮಾರರಾಮ ಸ್ವಲ್ಪ ಹೊತ್ತು ಯೋಚಿಸುವನು. ಆತ ಜಾಣ್ಮೆ ತೋರಿ ಆ ಚೆಂಡನ್ನು ಬಾಯಿಂದ ಕಿತ್ತುಕೊಳ್ಳುವನು. ಇದರ ತಾರ್ಕಿಕ ಅಂತ್ಯವೆಂದರೆ- ‘ತಾನು ಮಗುವಿದ್ದಾಗ ಮೊಲೆ